**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ.115/2024

ಪಿ.ಡಬ್ಲ್ಯೂ -01

ಸಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ಶಮಂಶ್ ಗೌಡ್ ಎನ್. ಎಂ

ತಂದೆಯ ಹೆಸರುಃ- ಮರಿಮಾದಯ್ಯ

ವಯಸ್ಸುಃ- 33 ವರ್ಷ

ಉದ್ಯೋಗಃ- ಪಿ.ಎಸ್.ಐ

ವಾಸಃ- ಅಮೃತೂರು

**ಸಾಕ್ಷಿಗೆ ದಿಃ 17.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು 13.07.2023 ರಿಂದ ಇಲ್ಲಿಯವರೆಗೆ ಅಮೃತೂರು ಪೋ. ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 17.10.2023 ರಂದು ಸಂಜೆ 4 ಗಂಟೆಗೆ ಪೋಲಿಸ ಉಪಾಧಿಕ್ಷಕರು ಕುಣಿಗಲ್ ಉಪ ವಿಭಾಗಾಧಿಕಾರಿಗಳು ಕರೆ ಮಾಡಿ ನನಗೆ ಎಡಿಯೂರು ಬಸ್ ನಿಲ್ದಾಣದ ಹತ್ತಿರ ಬರಲು ಹೇಳಿದ್ದು ನಂತರ ಜಲದಗೇರೆಗೆ ಹೋಗುವ ರಸ್ತೆಯಲ್ಲಿ ಇರುವ 1 ಪಾಳು ಬಿದ್ದ ಮನೆಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಹೆಚ್.ಪಿ ಮತ್ತು ಭಾರತ ಕಂಪನಿಯ ಡ್ಯೊಮೆಸ್ಟಿಕ ಸಿಲಿಂಡರಗಳಿಂದ ಕಮರ್ಸಿಯಲ್ ಸಿಲಿಂಡರಗಳಿಗೆ ಗ್ಯಾಸ್ ರೀ ಫಿಲಿಂಗ್ ಮಾಡುತ್ತಿದ್ದಾರೆಂದು ಮಾಹಿತಿ ತಿಳಿಸುತ್ತಾರೆ. ನಂತರ ನಾನು ಚಾಸಾ 4 ಮತ್ತು 5 ಅವರೊಂದಿಗೆ ಅಲ್ಲಿಗೆ ಸಂಜೆ 4.30 ಗಂಟೆಗೆ ಹೋಗಿದ್ದು ಮುಂದೆ ಸಿಬ್ಬಂದಿಗಳನ್ನು ಕಳುಹಿಸಿ ನಾನು ಮತ್ತು ಡಿ.ಎಸ್.ಪಿ ಅವರು ಹಿಂದೆ ಹೋಗಿ ನೋಡಲಾಗಿ ಸದರಿ ವ್ಯಕ್ತಿ ನಮ್ಮನ್ನು ನೋಡಿ ಮುಂದೆ ಬಂದಿರುತ್ತಾನೆ. ನಂತರ ಆತನನ್ನು ಡಿ.ಎಸ್.ಪಿ ಅವರು ವಿಚಾರ ಮಾಡಲಾಗಿ ನನ್ನ ಹೆಸರು ಲಕ್ಷ್ಮಿಕಾಂತ ಎಂದು ತಿಳಿಸಿದ್ದು ಏನು ಮಾಡುತ್ತಿದ್ದೀಯಾ ಎಂದು ಕೇಳಿದಾಗ ಗ್ಯಾಸ ರೀ ಫಿಲಿಂಗ್ ಮಾಡುತ್ತಿರುವುದಾಗಿ ತಿಳಿಸಿದ್ದು ಆತನ ಬಳಿ ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಇಲ್ಲವೆಂದು ಹೇಳಿರುತ್ತಾನೆ.

ಸದರಿ ಮನೆ ಯಾರಿಗೆ ಸೇರಿದ್ದು ಎಂದು ಕೇಳಲಾಗಿ ನರಗೇಹಳ್ಳಿಯ ರಾಮಚಂದ್ರಯ್ಯ ಅವರ ಮನೆಯಾಗಿದ್ದು ನಾನು ಬಾಡಿಗೆಗೆ ಪಡೆದಿರುತ್ತೇನೆಂದು ತಿಳಿಸಿರುತ್ತಾನೆ. ಮನೆಯ ಒಳಗಡೆ ಹೋಗಿ ನೋಡಲಾಗಿ ಹೆಚ್.ಪಿ ಗ್ಯಾಸ ಕಂಪನಿಯ 4 ಖಾಲಿ ಮತ್ತು 1 ತುಂಬಿದ ಸಿಲಿಂಡರ್ ಹಾಗೂ ಭಾರತ ಗ್ಯಾಸ್ ಕಂಪನಿಯ 6 ಖಾಲಿ ಮತ್ತು 1 ಅರ್ದ ಇರುವ ಸಿಲಿಂಡರ್ ಮತ್ತು ಹೆಚ್.ಪಿ ಕಂಪನಿಯ 8 ತುಂಬಿರುವ ಹಾಗೂ 1 ಅರ್ದ ಇರುವ ಕಮರ್ಷಿಯಲ್ ಸಿಲಿಂಡರಗಳು, ತೂಕದ ಸ್ಕೇಲ್ ಮತ್ತು ರೀ

ಫಿಲಿಂಗ್ ರಾಡಗಳು ಇರುವುದು ಕಂಡು ಬಂದಿರುತ್ತವೆ. ಸದರಿ ವ್ಯಕ್ತಿ ಯಾವುದೇ ಸುರಕ್ಷಿತ ಕ್ರಮಗಳನ್ನು ಅನುಸರಿಸದೇ ಗ್ಯಾಸ ರೀ ಫಿಲಿಂಗ್ ಮಾಡುತ್ತಿದ್ದು ಅಕ್ಕಪಕ್ಕದ ಮನೆಗಳಿಗೆ ಹಾನಿ ಉಂಟಾಗುವ ಸಂಭವ ಇರುತ್ತದೆ ನಂತರ ನಾನು ದೂರನ್ನು ಟೈಪ್ ಮಾಡಿಸಿ ಚಾಸಾ 5 ಅವರ ಮೂಲಕ ಠಾಣೆಗೆ ಕಳುಹಿಸಿದ್ದು ನಂತರ ಚಾಸಾ 10 ಅವರು ದೂರನ್ನು ದಾಖಲಿಸಿಕೊಂಡು ಸ್ಥಳಕ್ಕೆ ಬಂದಿರುತ್ತಾರೆ. ದೂರಿಗೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ 7 ಅವರು ಚಾಸಾ 2, 3 ಮತ್ತು 6 ಅವರೊಂದಿಗೆ ಸ್ಥಳಕ್ಕೆ ಬಂದಿದ್ದು ಪಂಚನಾಮೆಯನ್ನು ಸಂಜೆ 6.30 ರಿಂದ 7.45 ರವರೆಗೆ ಮಾಡಿರುತ್ತಾರೆ. ನಂತರ ಹೆಚ್.ಪಿ ಗ್ಯಾಸ ಕಂಪನಿಯ 4 ಖಾಲಿ ಮತ್ತು 1 ತುಂಬಿದ ಸಿಲಿಂಡರ್ ಹಾಗೂ ಭಾರತ ಗ್ಯಾಸ್ ಕಂಪನಿಯ 6 ಖಾಲಿ ಮತ್ತು 1 ಅರ್ದ ಇರುವ ಸಿಲಿಂಡರ್ ಮತ್ತು ಹೆಚ್.ಪಿ ಕಂಪನಿಯ 8 ತುಂಬಿರುವ ಹಾಗೂ 1 ಅರ್ದ ಇರುವ ಕಮರ್ಷಿಯಲ್ ಸಿಲಿಂಡರಗಳು, ತೂಕದ ಸ್ಕೇಲ್ ಮತ್ತು ರೀ ಫಿಲಿಂಗ್ ರಾಡಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಕ್ಷೆಯನ್ನು ಸಹ ತಯಾರು ಮಾಡಿರುತ್ತಾರೆ. ಮು. ಮಾ. ಗಳನ್ನು ಗುರುತಿಸುತ್ತೇನೆ.

**ಈ ಹಂತದಲ್ಲಿ ಆರೋಪಿ ನ್ಯಾಯಾಲಯದ ಮುಂದೆ ಹಾಜರು ಇರದೆ ಇರುವ ಕಾರಣ ಆತನ ಗುರುತಿಸುವಿಕೆಗೆ ಸ.ಸ. ಅ. ಅವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮೂಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**